ಕರ್ನಾಟಕ ವಿಧಾನ ಸಭೆ

ಮಂಗಳವಾರ 30ನೇ ಆಗಸ್ಟ್ 1983, ಶ್ರಾವಣ ಬ॥ 7, ಶಾ. ಶಕ 1905

ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು
ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು

[ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಕೊಡಲಾದ ಉತ್ತರಗಳು

ವಿಷಯ : ಸಿಂಗನೂರು ಮತ್ತು ಈರೂರು ಏತ ನೀರಾವರಿ ಯೋಜನೆ ಬಗ್ಗೆ.

ಪ್ರ. 193 (18) ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಮುಂಡರಗಿ ತಾ : ಸಿಂಗಟೂರು ಏತ ನೀರಾವರಿ ಯೋಜನೆ ಮತ್ತು ಈರೂರು ಏತ ನೀರಾವರಿ ಯೋಜನೆಗಳಿಂದ ಎಷ್ಟು ಎಕರೆ ನೀರಾವರಿಯಾಗಲು ಯೋಜನೆ ತಯಾರಾಗಿದೆ ;

(ಆ) ಮೊದಲನೇ ಹಂತವು ಯಾವಾಗ ಮುಗಿಯಿತು ಮತ್ತು ಎಷ್ಟು ಹಣ ಖರ್ಚಾಗಿದೆ ;

(ಇ) ಈಗ ಎಷ್ಟು ಎಕರೆಗೆ ನೀರು ಒದಗಿಸಲಾಗುತ್ತಿದೆ :

(ಈ) ಎರಡನೇ ಹಂತ ಯಾವಾಗ ಪ್ರಾರಂಭವಾಗುತ್ತದೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ, ಸಣ್ಣ ನೀರಾವರಿ ರಾಜ್ಯ ಸಚಿವರು.—

(ಅ) ಸಿಂಗಟೂರು ಮೊದಲನೆಯ ಮತ್ತು ಎರಡನೆಯ ಹಂತದ ಯೋಜನೆಯಲ್ಲಿ 4780 ಎಕರೆ ನೀರಾವರಿ ಮಾಡಲು ಉದ್ದೇಶಿಸಲಾಗಿದೆ. (ಮೊದಲನೆಯ ಹಂತ 2,608 ಎಕರೆ ಮತ್ತು ಎರಡನೆಯ ಹಂತ 2,172 ಎಕರೆ) ಆದರೆ ಈರೂರು ಏತ ನೀರಾವರಿ ಬಗ್ಗೆ ಯಾವ ಯೋಜನೆಯೂ ತಯಾರಾಗಿಲ್ಲ.

(ಆ) ಸಿಂಗಟೂರು ಮೊದಲನೆಯ ಹಂತವು 1976ರಲ್ಲಿ ಮುಗಿಯಿತು. ಇದಕ್ಕೆ ಖರ್ಚಾಗಿರುವ ಹಣ 16·47 ಲಕ್ಷ ರೂಗಳು.

(ಇ) ಈಗ 1,500 ಎಕರೆಗಳಿಗೆ ನೀರು ಒದಗಿಸಲಾಗುತ್ತಿದೆ.

(ಈ) ಎರಡನೇ ಹಂತದ ಪರಿಷ್ಕೃತ ಅಂದಾಜುಗಳು ತಯಾರಾಗುತ್ತಿವೆ. ಮಂಜೂರಾತಿ ದೊರಕಿದ ನಂತರ ಈ ಕಾರ್ಯವನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ. ಎಚ್. ಕುರಡಗಿ.— (ಇ) ಗೆ ಉತ್ತರದಲ್ಲಿ 1,500 ಎಕರೆಗಳಿಗೆ ನೀರನ್ನು ಒದಗಿಸಲಾಗುತ್ತಿದೆಯೆಂದು ಹೇಳಿದ್ದೀರಿ, ಆದರೆ ಕೆನಾಲ್ ಪೂರ್ಣವಾಗಿ ತಯಾರಾಗಿದ್ದಿದ್ದರೆ ಇಷ್ಟು ಕಡಿಮೆ ಪ್ರಮಾಣದಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲವೆಂದು ನನ್ನ ಅಭಿಪ್ರಾಯ, ಇದಕ್ಕೆ ತಾವೇನು ಹೇಳುತ್ತೀರಿ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ನಮಗೆ ಬಂದಿರತಕ್ಕ ಮಾಹಿತಿ ಪ್ರಕಾರವಾಗಿ ತಿಳಿಸಿದ್ದೇನೆ. ತಾವು ಹೇಳುವ ಪ್ರಕಾರವಾಗಿ ರೈತರು ಪೂರ್ಣವಾಗಿ ಅನುಕೂಲತೆಯನ್ನು ಪಡೆಯುವುದಕ್ಕೆ ಸಿದ್ಧರಾಗಿದ್ದರೆ ಕೆನಾಲ್ ದುರಸ್ತಿ ಮಾಡಿಸಿಕೊಡುತ್ತೇವೆ.

ಶ್ರೀ ಕೆ. ಎಚ್. ಕುರಡಗಿ.—ನೀರಿನ ಸಲುವಾಗಿ ನಮ್ಮ ರೈತರು ಅಸಿಸ್ಟೆಂಟ್ ಮತ್ತು ಎಗ್ಜಿಕ್ಯುಟಿವ್ ಇಂಜಿನಿಯರ್‌ರವರನ್ನು ಫೇರಾವೊ ಮಾಡಿದ್ದಾರೆ. ಲೈನಿಂಗ್ ಸರಿಯಾಗಿಲ್ಲದೇ ಇರುವುದರಿಂದ ನೀರು ಸೀಪೇಜ್ ಆಗಿ ನೀರೆಲ್ಲಾ ಒಂದೇ ಕಡೆ ಕಲೆಕ್ಟ್ ಆಗಿ ರೈತರ ಜಮೀನೂ ಸಹ ಹಾಳಾಗಿ ಹೋಗುತ್ತಿದೆ. ಆದುದರಿಂದ ಇದನ್ನು ಆದಷ್ಟು ಬೇಗ ದುರಸ್ತಿ ಮಾಡಿಸಿ ಕೊಡುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅಲ್ಲಿ ಟನಲ್ ಸರಿಯಾಗಿಲ್ಲದೇ ಇದ್ದರೆ, ಲೈನಿಂಗ್ ಎಲ್ಲಾ ಸರಿಪಡಿಸಿ ಅಲ್ಲಿಯ ಆಚ್ಚುಕಟ್ಟುದಾರರಿಗೆ ನೀರನ್ನು ಉಪಯೋಗಿಸಿಕೊಳ್ಳುವ ಹಾಗೆ ಮಾಡಿಸಿಕೊಡುತ್ತೇವೆ.

ಶ್ರೀ ಕೆ. ಎಚ್. ಕುರಪಟಿ.—ಎರಡನೇ ಹಂತದ ಯೋಜನೆಯ ಅಂದಾಜು ಪತ್ರಿಕೆ ಈಗಾಗಲೇ ಸರ್ಕಾರದ ಮುಂದೆ ಬಂದಿದೆ. ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಪರಿಶೀಲನೆ ಮಾಡಿ ಅದನ್ನು ಮಂಜೂರು ಮಾಡಿಕೊಡುತ್ತೇವೆ.

ವಿಷಯ : ಹೇಮಾವತಿ ಜಲಾಶಯದಿಂದ ತುಮಕೂರು ಜಿಲ್ಲೆಗೆ ಕೃಷಿಗಾಗಿ ನೀರನ್ನು ಒದಗಿಸುವ ಬಗ್ಗೆ,

ಪ್ರ. 194 (32) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹೇಮಾವತಿ ಜಲಾಶಯದ ಎಡದಂಡೆ ನಾಲೆಯಿಂದ ತುಮಕೂರು ಜಿಲ್ಲೆಯ ತಿಪಟೂರು, ತುರುವೇಕೆರೆ, ಗುಬ್ಬಿ, ತುಮಕೂರು, ಕುಣಿಗಲ್ ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕುಗಳಿಗೆ ನೀರನ್ನು ಒದಗಿಸಲು ಬಾಗೂರು-ನವಿಲೆ ಹತ್ತಿರ ಸುರಂಗಮಾರ್ಗವನ್ನು ನಿರ್ಮಿಸುತ್ತಿರುವುದು ನಿಜವೇ ;

(ಆ) ಹಾಗಿದ್ದಲ್ಲಿ ಸುರಂಗ ಮಾರ್ಗದ ಕೆಲಸ ಯಾವ ಹಂತದಲ್ಲಿದೆ ;

(ಇ) ಸುರಂಗ ಮಾರ್ಗದ ಕೆಲಸ ವಿಳಂಬವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(ಈ) ಹಾಗಿದ್ದಲ್ಲಿ ಪ್ರಮುಖ ಕಾರಣಗಳೇನು .

(ಉ) ಸುರಂಗ ಮಾರ್ಗ ಹಾಗೂ ಎಡದಂಡೆ ನಾಲೆಯನ್ನು ಪೂರ್ಣಗೊಳಿಸಿ ತುಮಕೂರು ಜಿಲ್ಲೆಗೆ ನೀರನ್ನೊದಗಿಸಲು ನಿರ್ದಿಷ್ಟ ಕಾಲ ಹಾಗೂ ನಿರ್ದಿಷ್ಟ ಕಾರ್ಯಕ್ರಮಗಳನ್ನೇನಾದರೂ ಸರ್ಕಾರದವರು ಹೊಂದಿದ್ದಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ, ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು.—

(ಅ) ಅಹುದು.

(ಆ) ಸುರಂಗದ ಒಟ್ಟು ಉದ್ದದ 9·72 ಕಿ.ಮೀ.ನಲ್ಲಿ ಇದುವರೆವಿಗೂ 3·35 ಕಿ.ಮೀ.ನಷ್ಟು ಸುರಂಗ ಕೊರೆಯುವ ಕೆಲಸ ಮುಗಿದಿದೆ.

(ಇ) ಸರ್ಕಾರದ ಗಮನಕ್ಕೆ ಬಂದಿದೆ.

(ಈ) ಈ ಸುರಂಗ ಮಾರ್ಗದಲ್ಲಿ ಹೊಸದಾಗಿ ಕೆಲವು ಭೂವಿಜ್ಞಾನ ಸಮಸ್ಯೆಗಳು ಕಂಡು ಬಂದಿರುವ ಪ್ರಯುಕ್ತ ಮತ್ತು ಎಚ್ಚರಿಕೆಯಿಂದ ಕಾರ್ಯಗಳನ್ನು ನಿರ್ವಹಿಸುವ ಕಾರಣ ಕಾರ್ಯಕ್ರಮದಂತೆ ಸುರಂಗದ ಕೆಲಸಗಳು ನಡೆಯಲು ಸಾಧ್ಯವಾಗುತ್ತಿಲ್ಲ.

(ಉ) 1989 ನೆಯ ಇಸವಿಯ ವೇಳೆಗೆ ಸುರಂಗ ಮತ್ತು ನಾಲೆಯ ಕಾರ್ಯವನ್ನು ಪೂರ್ಣಗೊಳಿಸಿ ನೀರನ್ನೊದಗಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಭೂ ವಿಜ್ಞಾನ ಸಮಸ್ಯೆಗಳು ಎಷ್ಟು ದಿವಸದಿಂದ ಇವೆ ? ಈ ಸಮಸ್ಯೆಗಳನ್ನು ಬಿಡಿಸುವುದಕ್ಕೆ ಏನೇನು ಕ್ರಮಗಳನ್ನು ಕೈಗೊಂಡಿದ್ದೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಈ ಸಮಸ್ಯೆ ಈಗಿನದು ಅಲ್ಲ. 2 ವರ್ಷಗಳಿಂದಲೂ ಇದೆ ಪ್ರತಿಯೊಂದು ಹಂತದಲ್ಲೂ ಈ ಸಮಸ್ಯೆ ಉದ್ಭವವಾಗುತ್ತಿದೆ. ತಾವೂ ಸಹ ಹೋಗಿ ನೋಡಿಕೊಂಡು ಬಂದಿದ್ದೀರಿ. ಒಂದು ಕಡೆ ಎಸ್ಕಲೇಷನ್ ಮಾಡಿಕೊಂಡು ಕೊರಕೊಂಡು ಹೋಗುತ್ತಿದ್ದರೆ ಮೇಲ್ಭಡೆಯಿಂದ ಕೆಂಪ್ಲೀಟ್ ಆಗಿ ಕೊಲ್ಯಾಪ್ಸ್ ಆಗಿರತಕ್ಕದ್ದನ್ನು ತಾವು ನೋಡಿದ್ದೀರಿ. ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ತರಹದ ಮಣ್ಣು ಸಿಕ್ಕಿದೆ, ಇದರ ಬಗ್ಗೆ ತಜ್ಞರು ಕೂಡ ಬಂದು ಪರಿಶೀಲನೆ ಮಾಡಿ ಅದಕ್ಕೆ ಪರಿಹಾರ ಕಂಡುಹಿಡಿಯುತ್ತಿದ್ದಾರೆ. ಆವೇಳಿ ಈ ಕೆಲಸವನ್ನು ಕೈಗೆ ಎತ್ತಿಕೊಂಡ ಕಾಲದಲ್ಲಿ ವೈಜ್ಞಾನಿಕವಾಗಿ ಸರಿಯಾದ ತನಿಖೆಯಾಗಿರಲಿಲ್ಲ. ಈ ಕೆಲಸವನ್ನು ತೆಗೆದುಕೊಳ್ಳಬೇಕು ಎನ್ನತಕ್ಕ ಆ ಮಹದಾಸೆಯಿಂದ ದಿ॥ ದೇವರಾಜ ಅರಸ್‌ರವರ ಕಾಲದಲ್ಲಿ ಈ ನಿರ್ಣಯವನ್ನು ತೆಗೆದುಕೊಂಡಿರುತ್ತಾರೆ. ಇದರ ಬಗ್ಗೆ ನಾನು ಯಾವುದೇ ಬೇರೆ